**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**

**C.C. - 3145/23** **ಪಿಡಬ್ಲ್ಯೂಃ 10**

**ಸಿಡಬ್ಲ್ಯೂಃ 21**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಆರ್ ಎ ವಕೀಲರಿಂದಃ**

ಠಾಣೆಯಲ್ಲಿ ದಿನಚರಿ ಇರುತ್ತದೆ ಎಂದರೆ ಸರಿ. ದಿನಚರಿಯಲ್ಲಿ ಆ ದಿನದ ದಿನಚರಿ ನಮೂದು ಮಾಡುತ್ತೇವೆ. ಈ ಪ್ರಕರಣದ ಬಗ್ಗೆ ದಿನಚರಿಯಲ್ಲಿ ನಮೂದು ಇದೆ ಎಂದರೆ ಸರಿ. ನಾನು ದಿನಚರಿಯನ್ನು ಹಾಜರುಪಡಿಸಿಲ್ಲ. ಈ ಪ್ರಕರಣದ ಕುರಿತು ನಮೂದು ಆದ ದಿನಚರಿ ಹಾಜರುಪಡಿಸಿಲ್ಲ. ಚಾಸಾ 19 ರವರಿಂದ ಕಡತ ಸ್ವೀಕಾರ ಮಾಡಿದ್ದೇನೆ ಎಂದರೆ ಸರಿ. ಘೋರ ಅಪಘಾತ ಆಗಿರುವುದರಿಂದ ನನಗೆ ನೀಡಿರುತ್ತಾರೆ. ನಾನು ಶವಪಂಚನಾಮೆ ಮಾಡಲು ಆಸ್ಪತ್ರೆಗೆ ದಿಃ 07-01-2023 ರಂದು ಹೋಗಿರುತ್ತೇನೆ. ಆ ಕಾಲಕ್ಕೆ ಚಾಸಾ 1, 4 ಮತ್ತು 5 ರವರು ಇದ್ದರು ಸಮಯ 18-19 ಗಂಟೆಯಾಗಿತ್ತು. ಆಸ್ಪತ್ರೆಗೆ ಹೋಗುವ ಮುಂಚೆ ಮಾಹಿತಿ ಬಂದಿತ್ತು. ಪಂಚನಾಮೆ ಕಾಲಕ್ಕೆ ಚಾಸಾ 4 ಮತ್ತು 5 ರವರನ್ನು ನಮ್ಮ ಸಿಬ್ಬಂದಿರವರು ಕರೆದುಕೊಂಡು ಬಂದರು. ಈಗ ಸಿಬ್ಬಂದಿಯ ಹೆಸರು ನನಗೆ ನೆನಪಿಲ್ಲ. ಚಾಸಾ 4 ಮತ್ತು 5 ರವರಿಗೆ ನೋಟಿಸ ಕೊಟ್ಟಿದ್ದೇನೆ. ಅಪಘಾತವಾದ ಸ್ಥಳ ಜನಬೀಡಿತ ಸ್ಥಳ ಎಂದರೆ ಸರಿ. ನಾನು ಸ್ಥಳಕ್ಕೆ ಭೇಟಿ ನೀಡಿದ್ದೇನೆ. ನಾನು ದಿಃ 07-01-2023 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದೇನು. ಆಗ ಸಮಯ 5 ಗಂಟೆಯಾಗಿರಬಹುದು. ಘಟನಾ ಸ್ಥಳದಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಯಾವ ವಾಹನ ಅಪಘಾತ ಪಡಿಸಿದೆ ಅಂತಾ ಸಾಕ್ಷಿದಾರರು ಹೇಳಿದ್ದಾರೆ. ಈ ಪ್ರಕರಣಕ್ಕೂ 1 ನೇ ಆರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕಿಗೊಸ್ಕರ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

ನ್ಯಾಯಾಲಯದ ಪ್ರಶ್ನೆಃ ಅಪಘಾತ ಪಡಿಸಿದ ಆಟೋದ ಆರ್ ಸಿ ಬುಕ್ ನ್ನು ಕಲೆ ಹಾಕಿದ್ದೀರಾ ?

ಉತ್ತರಃ ಆರ್ ಸಿ ಬುಕ್ ನ್ನು ಆಟೋಯಿಂದ ಪಡೆದುಕೊಂಡಿರುತ್ತೇನೆ.

ಪ್ರಶ್ನೆ-2ಃ ಆರ್ ಸಿ ಬುಕ್ ನ್ನು ಹಾಜರುಪಡಿಸಿದ್ದೀರಾ?

ಉತ್ತರಃ ಬಿ ಎಕ್ಸಾಕ್ಟ ನ್ನು ಹಾಜರುಪಡಿಸಿದ್ದೇನೆ.

**ಮರುವಿಚಾರಣಾ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.